'ಪೋರ್ಟಲ್ಲೋ' ಎಂಬ ವಿದೇಶೀ ಪಾನೀಯ ಪ್ರತ್ಯಕ್ಷವಾಯಿತು. ಪೆಂಡೆಂ ಸೋಡಾದವರ 'ಸುಗಂಧ'ಕ್ಕಿಂತಾ ರುಚಿಯಲ್ಲಿ ಭಿನ್ನವಾಗಿತ್ತು ಹಾಗೂ ನಾಲ್ಕಾಣೆಗೆ ಸಿಗುತ್ತಿತ್ತು. ಚಂದ್ರಣ್ಣನಿಗೆ ಸಿಡಿಲು ಬಡಿದಂತಾಯಿತು. ಅಂದು ಅವನಿಗೆ ಊಟ ಸೇರಲೇ ಇಲ್ಲ.

"ಇದೆಂಥ ಚಿಂತೆ ನಿಮಗೆ. ನಡುವೆ ಬಂದದ್ದು ನಡುವೆಯೇ ಹೋಗುತ್ತದೆ. ನಮಗೇನೂ ತೊಂದರೆಯಾಗುವುದಿಲ್ಲ ಬಿಡಿ" ಅಂದು ಸಮಾಧಾನ ಮಾಡಲು ಲಕ್ಷ್ಮಮ್ಮ ಪ್ರಯತ್ನಿಸಿದಳು. ಆದರೆ ಚಂದ್ರಣ್ಣ ಸುಮ್ಮನಿರಲಿಲ್ಲ.

ಅಲ್ಲಿವರೆಗೂ ವೇದಿಕೆಗಳಿಂದ, ಭಾಷಣಗಳಿಂದ ದೂರವಿದ್ದ ಚಂದ್ರಣ್ಣ ಆವತ್ತೇ ಪೆಂಡೆಂ ಸೋಡಾ ಸೆಂಟರ್‌ನ ಗಿರಾಕಿಗಳ ಮುಂದೆ ನಿಂತು ಭಾಷಣ ಮಾಡಿದ. "ಅಣ್ಣಂದಿರೇ ಈಗ ಶುರುವಾಗಿರೋ ಈ ವಿದೇಶೀ ವಸ್ತುಗಳ ವ್ಯವಹಾರ ನೋಡಿದ್ರೆ, ನನಗೆ ಇರುವೆಗಳು ಬೆಲ್ಲ ತಿನ್ನೋ ಕತೆಯಂತೆ ಕಾಣ್ತದೆ ಮಾರ್‍ರೆ. ಮೊದಲು ಬೆಲ್ಲದ ವಾಸನೆ ಒಂದೇ ಒಂದು ಇರುವೆ ಕಂಡುಹಿಡಿತದೆ. ನಂತರ ಮಿಕ್ಕೆಲ್ಲಾ ಇರುವೆಗಳು ಅಲ್ಲಿಗೆ ದಾರಿ ಮಾಡ್ಕೊಳ್ತವೆ. ಈ ವಿದೇಶೀ ವಸ್ತುಗಳ ಮಾರಾಟವೂ ಸಹ ಇಂಥದ್ದೇ. ಇವು ಒಂದೆರಡು ಸರಕುಗಳಿಗೆ ನಿಲ್ಲುವಂತದ್ದಲ್ಲ. ನಮ್ಮ ದೇಶದ ಸಂಪತ್ತನ್ನು ಕೊಳ್ಳೆ ಹೊಡೆದು ಕೊಂಡು ಹೋಗುವಂಥದ್ದು. ಎಣ್ಣೆ ಸುಬ್ರಹ್ಮಣ್ಯ ಶೆಟ್ರದು ಈ ಸೋಡಾಗಳಿಗಾಗಿ ವ್ಯಾಪಾರ ಅಲ್ಲ. ಅವರಿಗೆ ಇದರ ಬಗ್ಗೆ ಏನು ಗೊತ್ತುಂಟು ಮಾರ್‍ರೆ? ಈ ಸೋಡಾ ಪಾನೀಯಗಳನ್ನು ಮಾರುವುದರಿಂದಲೇ ಜೀವನ ನಡೆಸಬೇಕಾದ ಅವಶ್ಯಕತೆ, ದರ್ದು ಅವರಿಗಿಲ್ಲ. ಆದರೂ ಅವರು ಈ ವ್ಯಾಪಾರಕ್ಕೆ ಇಳಿದಿದ್ದಾರೆಂದರೆ, ಕೈಯಲ್ಲಿ ದುಡ್ಡು ಇದ್ದದರಿಂದ ಯಾವುದೇ ಸರಕನ್ನು ಮಾರಿ ದುಡ್ಡು ಮಾಡಿಕೊಳ್ಳುವುದರಿಂದ ಮುಂದಿನ ದಿನಗಳಲ್ಲಿ ರಾಷ್ಟ್ರಕ್ಕೆ, ಇಲ್ಲಿಯ ಸ್ಥಳೀಯ ಕೆಲಸಗಾರರಿಗೆ ಕುಶಲಕರ್ಮಿಗಳಿಗೆ ಊಹಿಸಲಾಗದಂಥಾ ನಷ್ಟವಾಗುವುದಂತೂ ನಿಜ. ನಾವೆಲ್ಲಾ ಇಂಥಾದ್ದನ್ನು ಮೊದಲಿಗೆ ನಿಲ್ಲಿಸಬೇಕು. ಅದಕ್ಕಾಗಿ ನಮ್ಮ ಊರಿನಿಂದ ಆ ವಿದೇಶಿ ಪಾನೀಯವನ್ನು ಹೊರಗೋಡಿಸಬೇಕು. ಅಲ್ಲಿಯವರೆಗೂ ನಾನು ಗಾಂಧೀ ಮಾರ್ಗದ ಆಮರಣಾಂತ ಉಪವಾಸ ಸತ್ಯಾಗ್ರಹ ಮಾಡಲು ನಿರ್ಧಾರ ಮಾಡುತ್ತಿದ್ದೇನೆ."

ಈ ಸುದ್ದಿ ಊರಲ್ಲಿ ಕಾಳ್ಗಿಚ್ಚಿನಂತೆ ಹಬ್ಬಿ ಊರಿನ ವ್ಯಾಪಾರಿಗಳು ಎರಡು ಗುಂಪುಗಳಾಗಿಬಿಟ್ಟರು. ಚಂದ್ರಣ್ಣನ ಜೊತೆಯಲ್ಲಿ ಉಪವಾಸ ಸತ್ಯಾಗ್ರಹದಲ್ಲಿ ಕುಳಿತುಕೊಳ್ಳಲು ಇನ್ನೂ ಕೆಲವರು ತಯಾರಿಯಲ್ಲಿದ್ದರು. ಆದರೆ ಇದ್ದಕ್ಕಿದ್ದಂತೆ ಆವತ್ತಿನ ತಡರಾತ್ರಿ ಎಣ್ಣೆ ಸುಬ್ರಮಣ್ಯ ಶೆಟ್ಟರ ಅಂಗಡಿಗೆ ಬೆಂಕಿ ಬಿತ್ತು. ಕಪ್ಪನೆಯ ಆಗಸದ ಕಡೆಗೆ ಕೆನ್ನಾಲಿಗೆ ಚಾಚಿ ಧಗಧಗ ಉರಿಯುತ್ತದ್ದ ಬೆಂಕಿಯನ್ನು ನೋಡಿ ಊರಿನ ಜನ ಭಯಭ್ರಾಂತರಾದರು.

ಇದು ಚಂದ್ರಣ್ಣ ಮಾಡಿಸಿದ ಕೆಲಸವೇ ಎನ್ನುವ ಗುಸುಗುಸು ಶುರುವಾಯಿತು. ಚಂದ್ರಣ್ಣನಂತೂ ಇಂಥಾ ಆಘಾತವನ್ನು ಕನಸು ಮನಸ್ಸಿನಲ್ಲಿಯೂ ಎಣಿಸಿರಲಿಲ್ಲ. ಇದರ ಸತ್ಯಾಸತ್ಯತೆ ತಿಳಿಯಲು ಹಿರಿಯರು ಮುಂದಾದರು. ತನಿಖೆಯಿಂದ ಕಡೆಗೆ ಗೊತ್ತಾಗಿದ್ದೇನೆಂದರೆ, ಚಂದ್ರಣ್ಣನ ಬಗ್ಗೆ ಅಭಿಮಾನವಿದ್ದ ಕೆಲವರು ಆವೇಶಕ್ಕೊಳಗಾಗಿ ಈ ಕೆಲಸ ನಡೆಸಿದ್ದಾರೆಂದು ತಿಳಿಯಿತು. ಆದರೆ ಅವರು ಯಾರೆಂದು ಪತ್ತೆಯಾಗಲಿಲ್ಲ.

ಇದೆಲ್ಲವನ್ನೂ ಮೌನವಾಗಿ ನೋಡುತ್ತಿದ್ದ ಚಂದ್ರಣ್ಣ, "ಇಷ್ಟು ದೊಡ್ಡ ದೇಶಕ್ಕೆ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿಯವರು ಅಹಿಂಸಾಮಾರ್ಗವನ್ನು ಆರಿಸಿಕೊಂಡಿದ್ದರೆ, ಊರಿನ ಸಣ್ಣ ಸಮಸ್ಯೆಗೆ ನಮ್ಮಲ್ಲಿ ಕೆಲವರು ಹಿಂಸೆಗಿಳಿದುಬಿಟ್ಟಿದ್ದಾರೆ. ಇದು ನನಗೆ ಬಹಳ ನೋವುಂಟು ಮಾಡಿದೆ. ಇದಕ್ಕೆ ಪ್ರಾಯಶ್ಚಿತವಾಗಿ ನಾನು ಹದಿನೈದು ದಿನ ಉಪವಾಸ ಸತ್ಯಾಗ್ರಹ ಮಾಡುತ್ತೇನೆ" ಅಂತ ತಮ್ಮ ನಿರ್ಣಯವನ್ನು ಘೋಷಿಸಿದರು. ಯಾರು ಬೇಡವೆಂದರೂ ಕೇಳಲಿಲ್ಲ.